## 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹರಿಹರ

**ಸಿ.ಸಿ ನಂಃ 465/2018**

| ಪಿರ್ಯಾದಿದಾರರುಃ | ವಿರುದ್ಧ | ಆರೋಪಿತರುಃ |
|---|---|---|
| ಬಸವರಾಜ ವಿ. ಭಂಡಾರಿ ತಂದೆ ವಿಠಲ್ ರಾವ್, 46 ವರ್ಷ, ವಾಸಃ ವಿಜಯನಗರ ಬಡಾವಣೆ , ಹರಿಹರ. | | ನಸ್ರುಲ್ಲಾ ತಂದೆ ಶೇಖ್ ಮಹಬೂಬ್ ಸಾಬ್, 28 ವರ್ಷ, ವಾಸಃ ಎ. ಎಂ. ಶಾದಿ ಮಹಲ್, ಹರಿಹರ. |

### ದಂಡಪ್ರಕ್ರಿಯಾ ಸಂಹಿತೆ ಕಲಂ.313 ರಡಿ ಆರೋಪಿಯ ಹೇಳಿಕೆ

ಪ್ರಶ್ನೆ 1 ಃ ನ್ಯಾಯಾಲಯದ ಮುಂದೆ ಪಿರ್ಯಾದುದಾರರ ಪರವಾಗಿ ನಡೆದ ವಿಚಾರಣೆಯಲ್ಲಿ ಸಾಕ್ಷಿದಾರರು ಹೇಳಿರುವ ಹೇಳಿಕೆಯನ್ನು ಕೇಳಿರುವಿರಾ ?

ಉತ್ತರಃ

ಪ್ರಶ್ನೆ 2ಃ ಪ್ರಾಸಾ.1 ಬಸವರಾಜ ವಿ. ಭಂಡಾರಿ ಇವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕಃ 20.06.2017 ರಂದು ಆರೋಪಿತರಾದ ನೀವು ಸಾಕ್ಷಿದಾರರ ಹತ್ತಿರ ನಿಮ್ಮ ಕುಟುಂಬದ ಅವಶ್ಯಕತೆಗಾಗಿ ರೂ.3,60,000/ ಗಳನ್ನು ಕೈಗಡ ಸಾಲವಾಗಿ ಪಡೆದಿದ್ದು, ಸದರಿ ಸಾಲವನ್ನು 3 ತಿಂಗಳೊಳಗಾಗಿ ಮರುಪಾವತಿ ಮಾಡುವುದಾಗಿ ಒಪ್ಪಿಕೊಂಡಿರುತ್ತೀರೆಂದು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು ?

ಉತ್ತರ ಃ

ಪ್ರಶ್ನೆ 3 ಃ ಪ್ರಾಸಾ.1 ಬಸವರಾಜ ವಿ. ಭಂಡಾರಿ ಇವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ಆರೋಪಿತರಾದ ನೀವು ಸದರಿ ಸಾಲದ ಮರುಪಾವತಿಗಾಗಿ ನಿಮ್ಮ ಖಾತೆಯನ್ನು ಹೊಂದಿದ್ದ ಡಿಸಿಸಿ ಬ್ಯಾಂಕ್, ಹರಿಹರ ಶಾಖೆಗೆ ಸಂಬಂಧಿಸಿದ ಚೆಕ್ ನಂ. 108511 ರಲ್ಲಿ ರೂ.3,60,000/ ಎಂದು ಬರೆದು ಸಹಿ ಮಾಡಿ ದಿನಾಂಕಃ 20.03.2018 ಕ್ಕೆ ಬ್ಯಾಂಕಿಗೆ ಹಾಜರುಪಡಿಸುವಂತೆ ಸೂಚಿಸಿ ಸದರಿ ಚೆಕ್ ನ್ನು ಪಿರ್ಯಾದುದಾರರಿಗೆ ನೀಡಿರುತ್ತೀರೆಂದು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು ?

ಉತ್ತರ ಃ

ಪ್ರಶ್ನೆ 4 ಃ ಪ್ರಾಸಾ.1 ಬಸವರಾಜ ವಿ. ಭಂಡಾರಿ ಇವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ಆರೋಪಿತರಾದ ನೀವು ನೀಡಿದ್ದ ಪೋಸ್ಟ್ ಡೇಟೇಡ್ ಚೆಕ್ ನ್ನು ಪಿರ್ಯಾದುದಾರರು ಹರಿಹರೇಶ್ವರ ಅರ್ಬನ್ ಕೋ

ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಹರಿಹರ ಶಾಖೆಯಲ್ಲಿ ದಿನಾಂಕ 21.03.2018 ರಂದು ಹಾಜರುಪಡಿಸಿದಾಗ , " ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ " ಎಂಬ ಷರಾದೊಂದಿಗೆ ಹಿಂತಿರುಗಿರುತ್ತದೆಂದು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು ?

ಉತ್ತರ ಃ

<u>ಪ್ರಶ್ನೆ 5 ಃ</u> ಪ್ರಾಸಾ.1 ಬಸವರಾಜ ವಿ. ಭಂಡಾರಿ ಚೌದ್ರಿ ಇವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ದಿನಾಂಕಃ 23.05.2018 ರಂದು ಆರೋಪಿತರಾದ ನಿಮಗೆ ಪಿರ್ಯಾದುದಾರರು ತಮ್ಮ ವಕೀಲರ ಮುಖಾಂತರ ನೊಟೀಸ್ ನೀಡಿದ್ದು, ಸದರಿ ನೋಟೀಸ್ ನಿಮಗೆ ತಲುಪಿದ ನಂತರವೂ ಸಾಲದ ಮೊತ್ತವನ್ನು ಮರುಪಾವತಿ ಮಾಡಿರುವುದಿಲ್ಲ ಎಂದು ನಿಮ್ಮ ವಿರುದ್ಧ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರವೇನು ?

ಉತ್ತರ ಃ

<u>ಪ್ರಶ್ನೆ 6 ಃ</u> ನೀವು ಏನನ್ನಾದರೂ ಹೇಳಬಯಸುವಿರಾ ?

ಉತ್ತರ ಃ

<u>ಪ್ರಶ್ನೆ 7 ಃ</u> ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಮಾಡುವಿರಾ ?

ಉತ್ತರ ಃ

(ತೆರೆದ ನ್ಯಾಯಾಲಯದಲ್ಲಿ ಆರೋಪಿತರಿಗೆ ಓದಿ ಹೇಳಿ ಆತನ ಹೇಳಿಕೆಯನ್ನು ಪಡೆದುಕೊಳ್ಳಲಾಯಿತು.)

ಸಹಿ

ದಿನಾಂಕಃ

1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ
ನ್ಯಾಯಾಲಯ, ಹರಿಹರ.